# MANGALORE INSTITUTE OF TECHNOLOGY & ENGINEERING

(A Unit of Rajalaxmi Education Trust®, Mangalore)

Autonomous Institute affiliated to VTU, Belagavi, Approved by AICTE, New Delhi

Accredited by NAAC with A+ Grade & ISO 9001:2015 Certified Institution




## Course Name : ಸಾಂಸ್ಕೃತಿಕ ಕನ್ನಡ

## Semester : $1^{st}$ / $2^{nd}$

## Course Code : 23HMCC109

# Module 3

| Module 3: ಆಧುನಿಕ ಕಾವ್ಯ ಭಾಗ | No. of Hrs: 2 |
|---|---|
| ಡಿ.ವಿ.ಜಿ. ರವರ ಮಂಕುತಿಮ್ಮನ ಕಗ್ಗದಿಂದ ಆಯ್ದ ಕೆಲವು ಭಾಗಗಳು | |
| ಹೊಸ ಬಾಳಿನ ಗೀತೆ : ಕುವೆಂಪು | |
| ಪೂರಕ ಓದು: ಕುರುಡು ಕಾಂಚಾಣ : ದ.ರಾ.ಬೇಂದ್ರೆ | |

# ಮಂಕುತಿಮ್ಮನ ಕಗ್ಗ

- ಡಿ ವಿ ಗುಂಡಪ್ಪ

ಕವಿ – ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ

ಜನನ – 17/03/1887

ಸ್ಥಳ – ದೇವನಹಳ್ಳಿ

ಹೆಂಡತಿ – ಭಾಗೀರತಮ್ಮ

ಸಾಹಿತ್ಯ – ಒಟ್ಟು 66 ಕನ್ನಡ ಕೃತಿಗಳ ರಚನೆ



* ಮಂಕುತಿಮ್ಮನ ಕಗ್ಗವು ಕನ್ನಡದ ಭಗವದ್ಗೀತೆ ಎಂದು ಪ್ರಸಿದ್ಧಿ.

* ಇವರು ಕನ್ನಡದ ಆಧುನಿಕ ಸರ್ವಜ್ಞ ಎಂದೇ ಪ್ರಸಿದ್ಧರು

# ಆತ್ಮೋನ್ನತಿ ದಾರಿ

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವ-ನ-ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ

ಜೀವನವನ್ನು ಗೌರವಿಸು, ಚೈತನ್ಯವನ್ನು ಗೌರವಿಸು, ಜಗತ್ತು ಅನ್ಯರದು ಎಂದು ಭೇದ ಮಾಡಬೇಡ. ನಾವು ಹೋರಾಟ ನಡೆಸುವುದೆ ಬದುಕಿನ ಏಳ್ಗೆಗಾಗಿ. ಅದು ನಿನ್ನ ಆತ್ಮೋನ್ನತಿಗೆ ದಾರಿ.

# ನಗುತ ಬಾಳು

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ

ನಗುತ - ಕೇಳುತ ನಗುವುದತಿಶಯದ ಧರ್ಮ ॥

ನಗುವ ನಗಿಸುವ ನಗಿಸಿ ನಗುತ ಬಾಳುವ -ವರವ ।

ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ

ಮಾನವನಿಗೆ ನಗುವು ಸಹಜವಾದ ಧರ್ಮ. ಅನ್ಯರನ್ನು ನಗಿಸುವುದು ಪರಧರ್ಮ. ನಗುವನ್ನು ಕೇಳಿನಗುವುದು ಅತಿಶಯ ಧರ್ಮ. ಆದುದರಿಂದ ದೇವರಲ್ಲಿ ನಗುವ, ನಗಿಸುವ, ನಗಿಸಿ ನಗುತ ಬಾಳುವವರನ್ನು ನೀನು ಬೇಡಿಕೊ.

# ಮಾನವನ ಯತ್ನ

ಹೊತ್ತು ಕಣಕಣದಿ ಮಣ್ಣನು ಗೆದ್ದಲಿರುವೆಗಳು ।
ಮೆತ್ತು ಎಡೆ ಬಿಡದೆ ದುಡಿದಾಗಿಸಿದ ಗೂಡು ॥
ಹುತ್ತವಾಗುವುದು ವಿಷಸರ್ಪಕ್ಕೆ ; ಮಾನವನ ।
ಯತ್ನಗಳ ಕಥೆಯಿಷ್ಟೇ – ಮಂಕುತಿಮ್ಮ

ಗೆದ್ದಲಹುಳುಗಳು ಕಣ ಕಣದಲ್ಲಿ ಮಣ್ಣನ್ನು ಹೊತ್ತು ಶ್ರಮದಿಂದ ಕಟ್ಟಿದ ಗೂಡು, ವಿಷದ ಹಾವಿಗೆ ಹುತ್ತವಾಗುವುದು. ಅಂತೆಯೇ ಮಾನವನ ಪ್ರಯತ್ನಗಳೂ ಆಗುವುವು.

# ಜೀವನ ತತ್ವ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
ಬೆಲ್ಲಸಕ್ಕರೆಯಾಗು ದೀನದುರ್ಬಲರಿಂಗೆ।
ಎಲ್ಲರೊಳಗೊಂದಾಗು – ಮಂಕುತಿಮ್ಮ॥

ಬೆಟ್ಟದಡಿಯಲ್ಲಿ ಹುಲ್ಲಾಗು. ಮನೆಗೆ ಮಲ್ಲಿಗೆಯ ಹೂವಾಗು. ವಿಧಿಯು ಕಷ್ಟಗಳೆಂಬ ಮಳೆ ಸುರಿಸಲು ಕಲ್ಲಾಗು. ದೀನದುರ್ಬಲರ ಪಾಲಿಗೆ ನೀನು ಬೆಲ್ಲ ಸಕ್ಕರೆಯಾಗು. ಎಲ್ಲಾ ಜನರೊಂದಿಗೆ ಸದಾ ಒಂದಾಗಿರು

## ಜ್ಞಾನ ವಿಜ್ಞಾನಗಳ ಸಾಮರಸ್ಯ

ಹೊಸಚಿಗುರು ಹಳೆ ಬೇರು ಕೂಡಿರಲು ಮರಸೊಬಗು।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ।
ಜಸವು ಜನಜೀವನಕೆ – ಮಂಕುತಿಮ್ಮ॥

ಹಳೆಯ ಬೇರಿನಿಂದ ಕೂಡಿದ ಮರ, ಹೊಸ ಚಿಗುರಿನಿಂದ ಕೂಡಿದಾಗ ನೋಡಲು ಸುಂದರವಾಗಿರುವುದು. ಹಳೆಯ ತತ್ವಗಳಿಂದ ಕೂಡಿದ ಧರ್ಮ ಹೊಸ ಯುಕ್ತಿಗಳಿಂದ ಕೂಡಿದರೆ ಚೆನ್ನ. ಪ್ರಾಚೀನ ಋಷಿವಾಣಿಯೊಡನೆ ವಿಜ್ಞಾನ ಕಲೆ ಕೂಡಿದರೆ ಜನಜೀವನ ಹುಲುಸಾಗುತ್ತದೆ.

# ಕುವೆಂಪು

1. ಪೂರ್ಣ ಹೆಸರು: ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ
2. ಕಾವ್ಯನಾಮ: ಕುವೆಂಪು
3. ಜನನ: 29 ಡಿಸೆಂಬರ್,1904
4. ಕಾಲ: 1904-1994

**5. ಊರು :** ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳ್ಳಿಯವರು.

**6. ಪ್ರಮುಖ ಕೃತಿಗಳು :**

ಕವನ ಸಂಕಲನಗಳು – ಕೊಳಲು, ಪಾಂಚಜನ್ಯ, ಪಕ್ಷಿಕಾಶಿ, ಪ್ರೇಮಕಾಶ್ಮೀರ.

ಕಥಾಸಂಕಲನಗಳು - ನನ್ನ ದೇವರು ಮತ್ತು ಇತರ ಕಥೆಗಳು, ಸನ್ಯಾಸಿ ಮತ್ತು ಇತರ ಕಥೆಗಳು.

ಕಾದಂಬರಿಗಳು- ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು

ವಿಮರ್ಶಾ ಸಂಕಲನಗಳು - ತಪೋನಂದನ ,ರಸೋವೈಸಃ

ಮಕ್ಕಳ ಪುಸ್ತಕಗಳು - ಅಮಲನ ಕತೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಜೋಗಿ.

ನಾಟಕಗಳು - ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್

ಆತ್ಮಕಥನ - ನೆನಪಿನ ದೋಣಿಯಲ್ಲಿ

## 7. ಪ್ರಶಸ್ತಿಗಳು:

- ಶ್ರೀರಾಮಾಯಣ ದರ್ಶನಂ ಮಹಾಕಾವ್ಯ- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ.
- ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ.
- ಮೈಸೂರು, ಕರ್ನಾಟಕ, ಗುಲ್ಬರ್ಗ ವಿಶ್ವವಿದ್ಯಾಲಯ-ಗಳಿಂದ ಗೌರವ ಡಾಕ್ಟರೇಟ್.
- ಕರ್ನಾಟಕ ರತ್ನ ಪ್ರಶಸ್ತಿ ಲಭಿಸಿದೆ.

## 8. ಇತರೆ:

- ಆಧುನಿಕ ಕನ್ನಡ ಸಾಹಿತ್ಯ ಕಾವ್ಯಗಳಲ್ಲಿ ಅಗ್ರಗಣ್ಯರು.
- ಧಾರವಾಡದಲ್ಲಿ ನಡೆದ 39ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.
- ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾದರು .

" ಸರ್ವರಿಗೆ ಸಮಬಾಳು! ಸರ್ವರಿಗೆ  ಸಮಪಾಲು !"
ಎಂಬ ನಗಯುಗವಾಣಿ ಘೋಷಿಸಿದೆ ಕೇಳಿ!
ಯುಗಯುಗದ ದಾರಿದ್ರ್ಯ ಭಾರದಿಂ ಬೆನ್ ಬಾಗಿ
ಗೋಳಿಡುವ ಬಡಜನರೆ, ಏಳಿರೈ ಏಳಿ!
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ!
ಕಂಗೆಟ್ಟ ಸೋದರರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ!

- ಕುವೆಂಪು ಇಲ್ಲಿ ಸ್ಪಷ್ಟವಾಗಿ ಶೋಷಿತರ ಪರವಾಗಿ ನಿಂತು ಬದಲಾವಣೆಗೆ ಕರೆ ಕೊಡುತ್ತಿದ್ದಾರೆ.
- ಇದು ಸಾಧ್ಯವಾಗಬೇಕಾದರೆ ಶೋಷಣೆಗೆ ಒಳಗಾಗಿರುವ ಜನರು ಜಾಗೃತರಾಗಬೇಕು. ಕ್ರಾಂತಿಕಾಳಿ  ಬರುತ್ತಿದ್ದಾಳೆ. ಬದಲಾವಣೆಯ ಗಾಳಿ ಬೀಸುತ್ತಿದೆ.
- ಈಗ ತುಳಿತಕ್ಕೊಳಗಾದ ಜನ ಎಚ್ಚೆತ್ತುಕೊಂಡರೆ ಜಡಗೊಂಡ ಈ ಸಮಾಜದಲ್ಲಿ ಚಲನೆಯುಂಟಾಗುತ್ತದೆ.
- ಅದಕ್ಕಾಗಿ ಕವಿ ಉತ್ಸಾಹ ತುಂಬಲು ಪ್ರಯತ್ನಿಸುತ್ತಾರೆ. ಹುಮ್ಮಸ್ಸಿನಿಂದ ಮಾತನಾಡುತ್ತಾರೆ. ಎಚ್ಚರದ ಪ್ರಜ್ಞೆಯಾಗಿ ತಿವಿಯುತ್ತಾರೆ.

ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ;
ಕಳಚಿ ಬೀಳುವುದಿಂದು ನಂದನದ ಬೇಲಿ!
ದೇವತೆಗಳಶ್ಲೀಲವೋದಕ್ಕೆ ಬದಲಾಗಿ
ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ!
ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ
ಪಕ್ಷ ಪಾತವನೆಲ್ಲ ಕೊಚ್ಚುವುದು ಬುದ್ಧಿ;
ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ
ದೇವನನ್ಯಾಯವನು ಮಾನವರೆ ತಿದ್ದಿ!

- ಅನ್ಯಾಯ ಎಂಬುದು ಇಂದ್ರನ ಕಾಲದಿಂದಲೂ ನಡೆಯುತ್ತಿದೆ.
- ಕುತಂತ್ರದಿಂದ ಇಂದ್ರನಂತೆ ಅಧಿಕಾರ ಪಡೆಯುವುದು ಸಾಧ್ಯವಿಲ್ಲ.
- ಅಂತಹ ಕುತಂತ್ರಕ್ಕೆ ಆಧುನಿಕ ಜನಾಂಗ ಅವಕಾಶ ನೀಡುವುದಿಲ್ಲ.
- ಹಣ, ಜಾತೀಯತೆ, ಸ್ವಜನ ಪಕ್ಷಪಾತ ಯುವ ಜನಾಂಗ ಕೊಚ್ಚಿ ಸರಿಪಡಿಸುತ್ತದೆ.
- ಮತ್ತೊಂದು ಹೊಸ ಸ್ವರ್ಗವನ್ನು ಇವರು ಸೃಷ್ಟಿಸಲಿದ್ದಾರೆ.

ಕೈಲಾಗದವರೆಂಬ ನಾವು ಕೀಳೆಂದೆಂಬ
ಹಣೆಬರಹವೆಂದೆಂಬ ಮೂಢತೆಯ ನೀಗಿ
ಯುಗಚಕ್ರ ಪರಿವರ್ತನೆಗೆ ಸರ್ವರೂ ಸೇರಿ
ಹೆಗಲು ಕೊಟ್ಟೊಮ್ಮನಸು ಮಾಡಿ ನೆರವಾಗಿ!
ಮೋಹಿನಿಗೆ ಮರುಳಾಗಿ ಮೂರ್ಖ ಮಾನವರೆಲ್ಲ
ತಮ್ಮ ಗೆಯ್ಮೆಯ ಫಾಲನನ್ಯರಿಗೆ ತೆತ್ತು
ಸತ್ತಂತೆ ಸಾಯದಿರಿ; ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ ನಿಮಗೆ ಮೃತ್ಯು!

- ಕವಿ ಹೀಗೆ ಅನೇಕ ನೆಲೆಗಳಲ್ಲಿ ಜಡಗೊಂಡ ಸಮಾಜದಲ್ಲಿ ಚಲನೆಯುಂಟುಮಾಡುವಂತೆ ತರುಣ ಮನಸ್ಸುಗಳನ್ನು, ತುಳಿತಕ್ಕೊಳಗಾದವರನ್ನು, ಹಣೆಬರಹವೆಂಬ ಮೌಢ್ಯದಲ್ಲಿರುವ ಮುಗ್ಧರನ್ನು ಎಚ್ಚರಿಸಲು ಪ್ರಯತ್ನಿಸುತ್ತಾರೆ.
- ಇಲ್ಲೆಲ್ಲ ಕವಿತೆ- ಸುಧಾರಕನ, ಬದಲಾವಣೆಯ ಹರಿಕಾರನ ಪಾತ್ರ ವಹಿಸುತ್ತದೆ.
- ಲಯಬದ್ಧ ಸಾಲುಗಳು ಸಂದೇಶವಾಹಕಗಳಾಗುತ್ತವೆ.

ಇಂದು ನೆತ್ತರು ಚೆಲ್ಲಿ ಮುಂದೆ ಬಡ ಮಕ್ಕಳಿಗೆ
ಹೊಟ್ಟೆಗನ್ನವ,ಮೈಗೆ ಬಟ್ಟೆಯನು ನೀಡಿ
ಇಂದು ನೋವಾದರೂ ಇಂದು ಸಾವಾದರೂ
ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ.
ಇಂದು ನೀವೇಳದಿರೆ ಕೆಚ್ಚೆದೆಯ ತಾಳದಿರೆ
ನಿಮ್ಮವರ ಬಾಳು ಎಂದೆಂದಿಗೂ ಹೇಡಿ!
"ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು"!
ಎಂದು ಸಾಹಸ ಕೇಳಿ, ಹಿಂಜರಿಯಬೇಡಿ!

- ಈ ತಾರತಮ್ಯ ಹಾಗೂ ವ್ಯತ್ಯಾಸಗಳನ್ನು ತಪ್ಪಿಸಲು ರಕ್ತತರ್ಪಣವಾದರೂ ಸರಿ, ಸತತ ಪ್ರಯತ್ನ ಮಾಡಬೇಕು.
- ಆಗ ಮಾತ್ರ ಮುಂದಿನ ಜನಾಂಗಕ್ಕೆ ಹೊಟ್ಟೆಗೆ ಅನ್ನ, ಮೈಗೆ  ಬಟ್ಟೆಯಾದರೂ ಸಿಗುವಂತಾಗುತ್ತದೆ.
- ಅದಕ್ಕಾಗಿ ನೋವೇ ಆಗಬಹುದು, ಸಾವು ಸಂಭವಿಸಬಹುದು. ಒಂದು ವೇಳೆ ಜಾಗೃತರಾಗದಿದ್ದಲ್ಲಿ ಧೈರ್ಯದಿಂದ ಮುನ್ನಡೆಯದಿದ್ದರೆ ಎಂದೆಂದೂ ರಣಹೇಡಿಗಳಂತೆ ಬದುಕಬೇಕಾಗುತ್ತದೆ ಎಂದು ಕುವೆಂಪು ಎಚ್ಚರಿಕೆ ನೀಡಿದ್ದಾರೆ.

- ಕವಿ ಕಂಡ ದರ್ಶನ 'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು' ಈ ಕವನದಲ್ಲಿ ಸಶಕ್ತವಾಗಿ ಅಭಿವ್ಯಕ್ತಗೊಂಡಿದೆ.

- ಯುಗದ ದಾಸ್ಯ ಕೊನೆಗೊಂಡು, ಅನ್ಯಾಯ ಅಕ್ರಮಗಳು ನಾಶವಾಗಿ ಹೊಸಬಾಳಿನ ಗೀತೆ ಬರೆಯಲು ಕವಿ ಆಹ್ವಾನ ನೀಡುತ್ತಾರೆ.

ಸಾವಿರಾರು ವರುಶಗಳಿಂದ ಜಾತಿಯ ತಾರತಮ್ಯದಿಂದಾಗಿ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಶ್ರಮಜೀವಿಗಳೆಲ್ಲರೂ ಜತೆಗೂಡಿ ಅರಿವು ಮತ್ತು ಎಚ್ಚರದ ಹೋರಾಟದ ಮೂಲಕ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ಪಡೆದು ಸಮಾಜದಲ್ಲಿ ಎಲ್ಲರೊಡನೆ ಸರಿಸಮಾನವಾಗಿ ತಲೆಯೆತ್ತಿ ಬಾಳುವಂತಾಗಬೇಕೆಂಬ ಕರೆಯನ್ನು ಈ ಕವನದಲ್ಲಿ ನೀಡಲಾಗಿದೆ

.

‘ ಅರಿವು ಮತ್ತು ಎಚ್ಚರದ ಹೋರಾಟ ’ ಎಂದರೆ ತಮ್ಮ ಬಡತನಕ್ಕೆ ಸಾಮಾಜಿಕ ರಚನೆ ಮತ್ತು ಸಂಪತ್ತಿನ ಹಂಚಿಕೆಯಲ್ಲಿರುವ ತಾರತಮ್ಯ , ವಂಚನೆ ಮತ್ತು ಸುಲಿಗೆಯನ್ನು ಗುರುತಿಸುವುದು. ಜಾತಿ ಮತ ದೇವರುಗಳ ಹೆಸರಿನಲ್ಲಿ ನಡೆಯುತ್ತಿರುವ ಸಂಪ್ರದಾಯದ ಆಚರಣೆಗಳಿಗೆ ಮಾನಸಿಕವಾಗಿ ದಾಸರಾಗದೆ, “ ನಮ್ಮ ಬಡತನಕ್ಕೆ ನಾವು ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪಪುಣ್ಯಗಳು ಮತ್ತು ನಮ್ಮ ಹಣೆಬರೆಹವೇ ಕಾರಣ “ ಎಂಬ ತಿಳಿಗೇಡಿತನದಿಂದ ಬಡತನದಲ್ಲಿಯೇ ನರಳದೆ, ದುಡಿಯುವ ಶ್ರಮಜೀವಿಗಳೆಲ್ಲರೂ ಒಗ್ಗಟ್ಟಿನಿಂದ ಜತೆಗೂಡಿ ಸಾಮಾಜಿಕ ಅನ್ಯಾಯಗಳ ಎದುರು ಹೋರಾಡುವುದು.

ಕ್ರಿ.ಶ. **1935** ನೆಯ ಇಸವಿಯಲ್ಲಿ ಈ ಕವನ ರಚನೆಗೊಂಡಿದೆ. ಆಗ ಜಗತ್ತಿನ ಒಟ್ಟು ಜನಸಮುದಾಯದಲ್ಲಿ ಶೇ.**40**ಕ್ಕಿಂತ ಹೆಚ್ಚು ಮಂದಿ ಕಪ್ಪು – ಬಿಳುಪು ಎಂಬ ಜನಾಂಗೀಯ ವರ್ಣ ತಾರತಮ್ಯ ಮತ್ತು ಮೇಲು ಜಾತಿ – ಕೆಳ ಜಾತಿ ಎಂಬ ಜಾತಿ ತಾರತಮ್ಯದಿಂದಾಗಿ ಹುಟ್ಟಿನಿಂದಲೇ ವಿದ್ಯೆ, ಸಂಪತ್ತು, ಆಡಳಿತದ ಗದ್ದುಗೆಯಿಂದ ವಂಚಿತರಾಗಿ ಕಡು ಬಡತನದಲ್ಲಿ ನರಳುತ್ತ ಅಪಮಾನದ ಬದುಕನ್ನು ನಡೆಸುತ್ತಿದ್ದರು. ಈ ಬಡವರೆಲ್ಲರೂ ದುಡಿಯುವ ಶ್ರಮಜೀವಿಗಳಾಗಿದ್ದರು. ಜಾತಿಯ ಕಟ್ಟುಪಾಡುಗಳಿಂದ ಕೂಡಿದ್ದ ಸಮಾಜದಲ್ಲಿ ಶ್ರಮಜೀವಿಗಳ ದುಡಿಮೆಯ ಉತ್ಪನ್ನದ ದೊಡ್ಡ ಪಾಲನ್ನು ರಾಜಮಹಾರಾಜರು, ಜಮೀನ್ದಾರರು ಮತ್ತು ಮೇಲು ಜಾತಿಯವರು ತಮ್ಮದನ್ನಾಗಿಸಿಕೊಳ್ಳಲು ಅವಕಾಶವಿತ್ತು.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಸಾಮಾಜಿಕ ಚಿಂತಕರು ಜಗತ್ತಿನ ಎಲ್ಲೆಡೆಯಲ್ಲಿಯೂ ದುಡಿಯುವ ಶ್ರಮಜೀವಿಗಳಾದ ಬಡವರಿಗೆ ಅವರ ಹಕ್ಕುಗಳ ಬಗ್ಗೆ ಅರಿವನ್ನು ಮೂಡಿಸಿ, ಬಡತನಕ್ಕೆ ಕಾರಣವಾಗಿರುವ ವ್ಯವಸ್ತೆಯನ್ನು ಬದಲಿಸಿ, ತಮ್ಮ ದುಡಿಮೆಯ ಉತ್ಪನ್ನವನ್ನು ದೋಚುತ್ತಿರುವ ವ್ಯಕ್ತಿಗಳನ್ನು ಸದೆಬಡಿದು ತಮ್ಮ ಜೀವನಮಟ್ಟವನ್ನು ಚೆನ್ನಾಗಿ ರೂಪಿಸಿಕೊಳ್ಳುವ ಕ್ರಾಂತಿಕಾರಕ ವಿಚಾರಗಳನ್ನು ಬಡಜನತೆಯ ಮನದಲ್ಲಿ ಬಿತ್ತಿದರು.

# ಕುರುಡು ಕಾಂಚಾಣಾ

–ದ.ರಾ.ಬೇಂದ್ರೆ

ಕವಿ – ದತ್ತಾತ್ರೇಯ ರಾಮಚಂದ್ರಬೇಂದ್ರೆ

ಜನನ – **31/01/1896**

ಸ್ಥಳ – ಧಾರವಾಡ

ತಾಯಿ – ಅಂಬಿಕೆ, ತಂದೆ – ರಾಮಚಂದ್ರ ಭಟ್ಟ

ಕವನ ಸಂಕಲನ – ಕೃಷ್ಣಕುಮಾರಿ, ಗರಿ, ಮೂರ್ತಿ ಮತ್ತು ಕಾಮಕಸ್ತೂರಿ, ಸಖಿಗೀತ, ಉಯ್ಯಾಲೆ,ನಾದಲೀಲೆ,ಮೇಘದೂತ, ಹಾಡುಪಾಡು, ಗಂಗಾವತರಣ,ಸೂರ್ಯಪಾನ, ಹೃದಯ ಸಮುದ್ರ, ನಾಕುತಂತಿ ಇತ್ಯಾದಿ.

ಕುರುಡು ಕಾಂಚಾಣಾ ಕುಣಿಯುತಲಿತ್ತು |
ಕಾಲಿಗೆ ಬಿದ್ದವರ ತುಳಿಯುತಲಿತ್ತೋ ||
ಕುರುಡು ಕಾಂಚಾಣಾ ||

'ಕುರುಡು ಕಾಂಚಾಣಾ' ಎನ್ನುವುದು ಒಂದು personification. ಕಾಂಚಾಣಲೋಭಿ ಹೃದಯಹೀನರ ಪ್ರತೀಕವಿದು. ಇವರು ಕುಣಿಯುವುದು ಸಂಪತ್ತಿನ ದೇವಿಯ ಎದುರಿನಲ್ಲಿ. ಸಂಪತ್ತು ಕೇವಲ ಕೆಲವರ ಐಶಾರಾಮಿಗಾಗಿ ಇರದೆ ಸರ್ವರ ಒಳಿತಿಗಾಗಿ, ಏಳ್ಗೆಗಾಗಿ ಇರಬೇಕು. ಮಾನವೀಯತೆಯನ್ನು ಕಡೆಗಣಿಸುವ ಸಂಪತ್ತನ್ನು ಬೇಂದ್ರೆಯವರು 'ಕುರುಡು

ಕಾಂಚಾಣಾ' ಎಂದು ಕರೆಯುತ್ತಾರೆ. ಇಂತಹ ಕುರುಡು ಕಾಂಚಾಣದ ಉನ್ಮಾದದ ಕುಣಿತವನ್ನು ಬೇಂದ್ರೆಯವರು (ಎಲ್ಲಮ್ಮನ)ಜೋಗತಿಯ ಉನ್ಮಾದದ ಕುಣಿತದೊಂದಿಗೆ ಹೋಲಿಸುತ್ತಿದ್ದಾರೆ. ಪಲ್ಲದ ಮೊದಲ ಸಾಲಿನಲ್ಲಿ 'ಕುಣಿಯುತಲಿತ್ತು' ಎನ್ನುವ ಸಾಮಾನ್ಯ ನೋಟದೊಂದಿಗೆ ಪ್ರಾರಂಭವಾಗುವ ಕವನವು, ಎರಡನೆಯ ಸಾಲಿನಲ್ಲಿ 'ತುಳಿಯುತಲಿತ್ತೋ' ಎನ್ನುವ ಪದದಿಂದ ಉದ್ವಿಗ್ನತೆಯನ್ನು, ಹತಾಶೆಯನ್ನು ವ್ಯಕ್ತಪಡಿಸುತ್ತದೆ. ಎಲ್ಲಮ್ಮನ ಜೋಗತಿ ಹಾಗು ಕಾಂಚಾಣಜೋಗತಿ ಈರ್ವರೂ ಜೋಗತಿಯರೇ. ಎಲ್ಲಮ್ಮನ ಜೋಗತಿ ಭಕ್ತಿಯ ಉನ್ಮಾದದಲ್ಲಿದ್ದರೆ, ಕಾಂಚಾಣಜೋಗತಿ ದುಡ್ಡಿನ ಉನ್ಮಾದದಲ್ಲಿದ್ದಾಳೆ. ಈ ಕವನದಲ್ಲಿ ಇವಳ ತೊಡುಗೆಯನ್ನು ಅವಳಿಗಿಟ್ಟು ಬೇಂದ್ರೆಯವರು ಚಿತ್ರಿಸಿದ್ದಾರೆ.

ಮೈಮೇಲೆ ದೇವಿ ಬಂದಾಗ, ಎಲ್ಲಮ್ಮನ ಜೋಗತಿಯು ಉನ್ಮಾದದಿಂದ ಕುಣಿಯುತ್ತಾಳೆ. ಅನೇಕ ಭಕ್ತರು ಜೋಗತಿಯ ಕಾಲಿಗೆ ಬಿದ್ದು, ಅವಳಿಂದ (ಎಲ್ಲಮ್ಮನ) ಅನುಗ್ರಹವನ್ನು ಪಡೆಯುತ್ತಾರೆ. ಕುರುಡು ಕಾಂಚಾಣವೂ ಸಹ ಅದೇ ರೀತಿಯಲ್ಲಿ ಉನ್ಮಾದದಿಂದ ಕುಣಿಯುತ್ತಿದೆ. ಹೊಟ್ಟೆಗಿಲ್ಲದ ಜನರು ಎರಡು ತುತ್ತು ಕೂಳಿಗಾಗಿ ಇವಳ ಕಾಲಿಗೆ ಬೀಳುತ್ತಾರೆ. ಅವರನ್ನೆಲ್ಲ ಈ ಜೋಗತಿ ತುಳಿದು ಹಾಕುತ್ತಾಳೆ. ಈ ರೀತಿಯಾಗಿ ಕವನದ ಪಲ್ಲದಲ್ಲಿ 'ಕಾಂಚಾಣ-ಜೋಗತಿಯ' ಕುಣಿತವನ್ನು ಬೇಂದ್ರೆಯವರು (ಎಲ್ಲಮ್ಮನ) ಜೋಗತಿಗೆ ಹೋಲಿಸಿ ಚಿತ್ರಿಸಿದ್ದಾರೆ; ಮುಂದಿನ ನುಡಿಗಳಲ್ಲಿ, ಅವಳ ವೇಷಭೂಷಗಳನ್ನು ವರ್ಣಿಸಿದ್ದಾರೆ.

ಬಾಣಂತಿಯೆಲುಬ ಸಾ-
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡಿಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ;

(ಎಲ್ಲಮ್ಮನ) ಜೋಗತಿಯು ತನ್ನ ಕಾಲಲ್ಲಿ ಬೆಳ್ಳಿಯ ಕಿರುಗೆಜ್ಜೆಗಳನ್ನು ಧರಿಸಿರುತ್ತಾಳೆ. ಕಾಂಚಾಣಜೋಗತಿಯೂ ಸಹ ತನ್ನ ಕಣಕಾಲುಗಳಲ್ಲಿ ಕಿರುಗೆಜ್ಜೆಗಳನ್ನು ಧರಿಸಿದ್ದಾಳೆ. ಆದರೆ ಇವು ಬಾಣಂತಿಯ ಎಲುವಿನಿಂದ ಮಾಡಿದ ಗೆಜ್ಜೆಗಳು. ಈ ಗೆಜ್ಜೆಗಳು ಸವೆದು ಹೋದ ಸಾಬಾಣದಷ್ಟು (soap) ಬೆಳ್ಳಗಿವೆ. 'ಬಾಣಂತಿಯೆಲುಬು' ಇಲ್ಲಿ ಎರಡು ಅರ್ಥಗಳನ್ನು ಧ್ವನಿಸುತ್ತದೆ. ಬಾಣಂತಿಯು ಮಗುವನ್ನು ಹೆತ್ತು ಸೃಷ್ಟಿಕ್ರಿಯೆಯನ್ನು ಮುಂದುವರಿಸುವಂತಹ ಹೆಂಗಸು. ಬಡತನದ ಹೊಡೆತದಿಂದಾಗಿ ಹಾಗು ಸಾಮಾಜಿಕ ಅನ್ಯಾಯದಿಂದ ಬಾಣಂತಿಯು ಈಗ ಸತ್ತು ಹೆಣವಾಗಿದ್ದಾಳೆ; ನಿಸರ್ಗಸಹಜವಾದ ಸೃಷ್ಟಿಕಾರ್ಯವು ನಿಂತು ಹೋಗಿದೆ. ಸವೆದು ಹೋಗಿ ಬೆಳ್ಳಗಾದ ಸಾಬಾಣವು ದುಡಿದುಡಿದು ಕ್ಷೀಣವಾದ ಬಾಣಂತಿಯನ್ನು ಸೂಚಿಸುತ್ತದೆ.

ಎರಡನೆಯ ಅರ್ಥವೆಂದರೆ, ಬಾಣಂತಿಯ ಎಲುಬಗಳನ್ನು ಮಾಟಗಾರರು ಅಭಿಚಾರಕ್ರಿಯೆಯಲ್ಲಿ ಬಳಸುತ್ತಾರೆ. ಈ ಕಾಂಚಾಣಜೋಗತಿಯು ತನ್ನ ಕಣಕಾಲುಗಳಲ್ಲಿ ಬಾಣಂತಿಯ ಎಲುವುಗಳ ಕಿರುಗೆಜ್ಜೆಯನ್ನು ಕಟ್ಟಿಕೊಂಡು ಕುಣಿಯುವ ಮಾಟಗಾತಿಯಾಗಿದ್ದಾಳೆ. ಇವಳ ಅಂತಿಮ ಉದ್ದೇಶವು ಸಮಾಜವನ್ನು ಹಾಳುಗೆಡುವುದಾಗಿದೆ. ಆದರೆ ಈ ಗೆಜ್ಜೆಗಳು 'ಕಾಣದ ಕಿರುಗೆಜ್ಜೆಗಳು'. ಆದುದರಿಂದ ಕಾಂಚಾಣಜೋಗತಿಯ ಕಿರುಗೆಜ್ಜೆಗಳಾಗಲಿ ಅಥವಾ ಅವಳ ಹೀನ ಉದ್ದೇಶವಾಗಲಿ ಸಮಾಜಕ್ಕೆ ಅದೃಶ್ಯವಾಗಿಯೇ ಇರುತ್ತವೆ.

ಇನ್ನು ಈ ಜೋಗತಿ ಧರಿಸಿದಂತಹ 'ಜೋಮಾಲೆ'(=ಜೋಗತಿಯ ಮಾಲೆ) ಎಂತಹದು? ಬಾಣಂತಿಯನ್ನು ಕೊಂದವಳು ಅವಳ ಮಕ್ಕಳನ್ನು ಬಿಟ್ಟಾಳೆಯೆ? ಸಣ್ಣ ಕಂದಮ್ಮಗಳು ಮುಗ್ಧ, ಅಸಹಾಯಕ ಜೀವಿಗಳು. ಅವುಗಳ ಕಣ್ಣುಗುಡ್ಡೆಗಳನ್ನೆ ಕಿತ್ತು, ಕವಡಿಗಳ ಮಾಲೆಯನ್ನು ಮಾಡಿಕೊಂಡು ಈ ಜೋಗತಿ ಕೊರಳಲ್ಲಿ ಧರಿಸಿದ್ದಾಳೆ. ಭವಿಷ್ಯದ ಸಂಕೇತಗಳಾದ ಈ ಕಂದಮ್ಮಗಳು ಇದೀಗ ಕುರುಡರಾಗಿದ್ದಾರೆ. ಈ ಮಾಲೆಯು 'ತಣ್ಣನ್ನ ಜೋಮಾಲೆ'! ಜೋಗತಿಯ ತಣ್ಣನೆಯ ಕ್ರೌರ್ಯಕ್ಕೆ ಇದು ಸಂಕೇತವಾಗಿದೆ.

ಬಡವರ ಒಡಲಿನ
ಬಡಬಾಸನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ;
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ-
ದುಂಬಿದಂತುಧೋ ಉಧೋ ಎನ್ನುತಲಿತ್ತೋ;

ಕೈಯಲ್ಲಿ ಉರಿಯುವ ಪಂಜನ್ನು ಹಿಡಿದುಕೊಂಡು, ದೇವಿಗೆ 'ಉಧೋ ಉಧೋ' ಎಂದು ಘೋಷಿಸುವುದು ಜೋಗತಿಯ ಪೂಜೆಯ ಭಾಗವಾಗಿದೆ. ಕಾಂಚಾಣಜೋಗತಿಯ ಕೈಯಲ್ಲೂ ಸಹ ಉರಿಯುತ್ತಿರುವ ಪಂಜಿದೆ. ಇವಳೂ ಸಹ 'ಉಧೋ ಉಧೋ' ಎಂದು ಗರ್ಜಿಸುತ್ತಿದ್ದಾಳೆ. ಆದರೆ ಇವಳು ಹಿಡಿದಿರುವುದು ಸಾಧಾರಣ ಪಂಜಲ್ಲ. ಇದು ಬಡವರ ಒಡಲಿನ ಬೆಂಕಿಯ ಪಂಜು. ಬಡವರ ಒಡಲೇ ಒಂದು ಸಮುದ್ರದಷ್ಟು ವಿಶಾಲವಾಗಿದೆ. ಏಕೆಂದರೆ ಇವರ ಹಸಿವೆಯನ್ನು ಹಿಂಗಿಸುವಷ್ಟು ಕೂಳು ಇವರಿಗೆ ಸಿಗುವುದಿಲ್ಲ. ಅಲ್ಲದೆ ಒಬ್ಬನು ಸಿರಿವಂತನಾಗಬೇಕಾದರೆ ನೂರು ಜನ ಬಡವರಾಗಿರಬೇಕಾಗುತ್ತದೆ! ಆದುದರಿಂದ ಬಡವರ ಒಡಲು ಅಪಾರ ಹಾಗು ಅನಂತ ಸಮುದ್ರದಷ್ಟು ಆಳ ಹಾಗು ವಿಶಾಲ! ಸಮುದ್ರದಲ್ಲಿ ಇರುವ ಬೆಂಕಿಗೆ 'ಬಡಬಾನಲ' ಎಂದು ಕರೆಯುತ್ತಾರೆ. ಬಡವರ ಒಡಲೊಳಗಿರುವ ಬೆಂಕಿಯು ಹಸಿವಿನ ಬೆಂಕಿ. ಆ ಬೆಂಕಿಯಿಂದ ಹೊತ್ತಿಸಿದ ಪಂಜನ್ನು ಈ ಜೋಗತಿ ಹಿಡಿದಿದ್ದಾಳೆ. (ಬಡಬಾನಲವು ಸಮುದ್ರದ ಬೆಂಕಿ ಎಂದು ಅರ್ಥ ನೀಡುವುದರ ಜೊತೆಗೇ 'ಬಡವರ+ಅನಲ' ಎಂದು ಶ್ಲೇಷೆಯ ಮೂಲಕ ಸೂಚಿಸುವದನ್ನೂ ಗಮನಿಸಬೇಕು.)

'ಉಧೋ ಉಧೋ' ಎಂದು ಉಗ್ಗಡಿಸುವ ಜೋಗತಿಯ ಮೈಯಲ್ಲಿ ದೇವಿಯ ಆವೇಶ ಬಂದಿರುತ್ತದೆ. ಈ ಕಾಂಚಾಣಜೋಗತಿಯ ಮೈಯಲ್ಲಿಯೂ ಆವೇಶವಿದೆ. ಆದರೆ ಇದು ಕಾಂಚಾಣದ ಆವೇಶ. ಕಾಂಚಾಣವನ್ನು ಹೇಗಾದರೂ ಸಂಪಾದಿಸಬೇಕೆನ್ನುವ ಲೋಭವು ಅವಳನ್ನು ಕುರುಡಳನ್ನಾಗಿ ಮಾಡಿದೆ. ಅವಳ ಬಾಯಿಯಿಂದ ಬರುವ 'ಉಧೋ ಉಧೋ' ಎನ್ನುವ ಉಗ್ಗಡಣೆಯು ಪವಿತ್ರವಾದ ಘೋಷವಲ್ಲ; ಇದು ಹುಂಬತನದ ಘೋಷ. ಇದು ಮುಗ್ಧ, ಅಸಹಾಯಕರ ಕಂಬನಿಯನ್ನು ಕುಡಿಯುವ ಅಪವಿತ್ರ ಬಾಯಿಯಿಂದ ಹೊರಡುತ್ತಿರುವ ಸಂವೇದನಾಶೂನ್ಯ ಘೋಷ.

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ;
ಗುಡಿಯೊಳಗೆ ಗಣಣ, ಮಾ
ಹಡಿಯೊಳಗೆ ತನನ, ಅಂ-
ಗಡಿಯೊಳಗೆ ಝುಣಣಣ ನುಡಿಗೊಡುತಿತ್ತೋ;

ಎಲ್ಲಮ್ಮನ ಜೋಗತಿಯು ಹಣೆಯ ಮೇಲೆ ಭಂಡಾರವನ್ನು (ಅಂದರೆ ಎಲ್ಲಮ್ಮ ದೇವಿಯ ಅರಿಶಿಣವನ್ನು) ಧರಿಸಿರುತ್ತಾಳೆ. ಈ ಕಾಂಚಾಣಜೋಗತಿಯು ಧರಿಸಿರುವ ಭಂಡಾರವೆಂತಹುದು? ಒಬ್ಬನು ದುಡ್ಡನ್ನು ಕೂಡಿಹಾಕಬೇಕಾದರೆ ನೂರು ಜನ ಬೆವರು ಹರಿಸಬೇಕಲ್ಲವೆ? ಈ ಕೂಲಿ ಜನರು ದುಡಿದುಡಿದು ಸೋತು ಸಣ್ಣಗಾದಾಗ ಇವರ ಮೈಯ ತೊಗಲೂ ಸಹ ಜೋತು ಬಿದ್ದಿರುತ್ತದೆ. ಅದೇ ಇವರ ಪಾಲಿಗೆ ಉಳಿದಿರುವ ಸಂಪತ್ತು. ಆ ಮೈದೊಗಲಿಗೆ ಹತ್ತಿದ ಧೂಳಿಯೇ ಈ ಕಾಂಚಾಣಜೋಗತಿಯು ತನ್ನ ಹಣೆಯ ಮೇಲೆ ಹಚ್ಚಿಕೊಂಡಂತಹ ಭಂಡಾರವಾಗಿದೆ. (ಭಂಡಾರ ಎಂದರೆ ಸಂಪತ್ತಿನ ಸಂಗ್ರಹಾಲಯ ಎನ್ನುವ ಶ್ಲೇಷೆ ಇಲ್ಲಿದೆ.)

ಇದಾದ ಬಳಿಕ, ದೇವಿಯ ಜೋಗತಿಯು ಗುಡಿಯೊಳಗೆ ಹೋಗಿ ಗಂಟೆ ಬಾರಿಸಿ ಪೂಜೆ ಸಲ್ಲಿಸುವಳಷ್ಟೆ? ಕಾಂಚಾಣಜೋಗತಿಯೂ ಸಹ ತನ್ನ ಹಣದ ಬಲದಿಂದ ಗುಡಿಗಳೊಳಗೆ ಪೂಜೆಯ ಅಧಿಕಾರವನ್ನು ಕೊಳ್ಳುವವಳೇ. (ದುಡ್ಡಿದ್ದವರಿಗೆ 'ಸ್ಪೆಶಲ್ ದರ್ಶನ' ಎನ್ನುವುದು ಎಲ್ಲರಿಗೂ ಗೊತ್ತಿದ್ದದ್ದೇ!) ಗುಡಿಗಳಲ್ಲಿ 'ಗಣಣ' ಎಂದು ಗಂಟೆ ಬಾರಿಸುವ ಇವಳು ಮಹಡಿಯ ಮನೆಗಳಲ್ಲಿ, ಹಣವುಳ್ಳವರ ಎದುರಿಗೆ 'ತನನ' ಎಂದು ಕುಣಿಯುವ ಸಾಮಾನ್ಯ ನಾಚುಗಾತಿಯಾಗುತ್ತಾಳೆ. ಇನ್ನು ದುಡ್ಡಿನ ಕಾರಾಗಾರಗಳಾದ ಅಂಗಡಿಗಳ ಒಳಗಂತೂ ಇವಳ ಝುಣಝುಣ ಪ್ರತಿಧ್ವನಿ

ಯಾವಾಗಲೂ ಕೇಳಿ ಬರುವಂತಹದು. ಹಣದ ಕುಣಿತ ಹೇಗೆ ಸರ್ವವ್ಯಾಪಿಯಾಗಿದೆ, ಸರ್ವಮಾನ್ಯವಾಗಿದೆ ಎನ್ನುವುದನ್ನು ಬೇಂದ್ರೆಯವರು ಇಲ್ಲಿ ವ್ಯಂಗ್ಯವಾಗಿ ಸೂಚಿಸಿದ್ದಾರೆ.

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ.

ಆದರೆ ಇಂತಹ ವಿನಾಶಕಾರಿ ಧಂಧೆ ಎಲ್ಲಿಯವರೆಗೆ ನಡೆದೀತು? ಅದು ಅತಿಶಯಕ್ಕೆ ಮುಟ್ಟಿದಾಗ (--ಪಾಪದ ಕೊಡ ತುಂಬಿದಾಗ ಎಂದು ಹೇಳುತ್ತಾರಲ್ಲವೆ?--) ಈ ಮಂಗಾಟದ ಕುಣಿತಕ್ಕೆ ಕೊನೆಯಾಗಲೇ ಬೇಕು. ತನ್ನ (ಪಾಪದ) ಭಾರ ತಾಳಲಾರದೆ ಈ ಜೋಗತಿ ಕುಸಿದು ಬೀಳಲೇ ಬೇಕು. 'ಅದು ಬಿದ್ದಾಗ, ತಡ ಮಾಡದೇ ಆ ಶವವನ್ನು ಎತ್ತಿ ಹಾಕಿರಿ' (--ಅದು ಮತ್ತೆ ಮೈದುಂಬೀತು ಎನ್ನುವ ಹೆದರಿಕೆಯಿಂದಲೆ?--) ಎಂದು ಬೇಂದ್ರೆಯವರು ಹೇಳುತ್ತಾರೆ. ತುಳಿತಕ್ಕೆ ಒಳಗಾದವರ ಆಸೆ ಹಾಗು ಆಶಯವೂ ಸಹ ಇದೇ ಆಗಿದೆ.

ಟಿಪ್ಪಣಿ: ಬೇಂದ್ರೆಯವರ ಕವನಗಳು ಕೇವಲ ಹಾಡುವ ಅಥವಾ ಮನನ ಮಾಡುವ ಕವನಗಳಷ್ಟೇ ಅಲ್ಲ. ಅವರು ತಮ್ಮ ಕವನಗಳ ಬರಹವನ್ನೂ ಸಹ ನಿರ್ದಿಷ್ಟ ರೀತಿಯಲ್ಲಿ ಬರೆಯುತ್ತಿದ್ದರು. ಯಾವ ಸಾಲಿನ ಕೆಳಸಾಲು ಎಲ್ಲಿ ಬರಬೇಕು, ಯಾವ ವಿರಾಮಗಳನ್ನು ಎಲ್ಲಿ ಬಳಸಬೇಕು ಎನ್ನುವುದರ ಬಗೆಗೆ ಅವರು ತುಂಬ ಕಾಳಜಿಯಿಂದ ಇರುತ್ತಿದ್ದರು. ಈ ಕವನದ ಮೊದಲ ಆರು ನುಡಿಗಳ ಕೊನೆಯ ಸಾಲುಗಳ ಕೊನೆಯಲ್ಲಿ ಅರ್ಧವಿರಾಮ ಬರುತ್ತದೆ. ಕೊನೆಯ (ಏಳನೆಯ ಸಾಲಿನ) ಕೊನೆಯಲ್ಲಿ ಮಾತ್ರ ಪೂರ್ಣವಿರಾಮ ಬರುತ್ತದೆ. ಕಾಂಚಾಣ-ಜೋಗತಿಯ ಪೂರ್ಣಚಿತ್ರವನ್ನು, ಯಾವುದೇ ವಿರಾಮವಿಲ್ಲದೆ ನೀಡುತ್ತಿದ್ದೇನೆ ಎನ್ನುವುದರ ಸೂಚನೆಯನ್ನು ಬೇಂದ್ರೆಯವರು ನೀಡುತ್ತಿದ್ದಾರೆ.